ದಿನಾಂಕ :14–02–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಆರ್.ಕೆ.ಎಂ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಲಿಖಿತ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆ ಸಾಕ್ಷಿಯ ಭಾಗವಾಗಿ ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ನಾನು ತೃತೀಯ ದರ್ಜೆ ಗುತ್ತಿಗೆದಾರನಿದ್ದು, ತೊರಿಸಲು ಕರ್ನಾಟಕ ಲೋಕೋಪಯೋಗಿ ಇಲಾಖೆ ಬಳ್ಳಾರಿ ವೃತ್ತ ಬಳ್ಳಾರಿ ಇವರು ನೀಡಿದ ನೋಂದಣಿ ಸಂಖ್ಯೆ. 4473 ನೇದ್ದರ ಪಾಸ್ ಪುಸ್ತಕದ ನೋಟರಿ ದೃಢೀಕೃತ ಅದರ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ಮರಳಿ ನೀಡಿ ಸದರಿ ದಾಖಲೆಯನ್ನು ನಿಪಿ-21 ಎಂದು, ಗುರ್ತಿಸಲಾಯಿತು. ಮೃತ ಹುಸೇನಪ್ಪ ಇವರು ನನ್ನ ಬಳಿ ಮೇಸ್ತ್ರಿ ಕೆಲಸ ಮಾಡುತ್ತಿದ್ದನು ಆ ಕುರಿತು ನಾನು ಪ್ರಮಾಣ ಪತ್ರ ನೀಡಿರುತ್ತೇನೆ. ಈಗ ನನಗೆ ತೊರಿಸಿದ ನಿಪಿ-13 ಇದು ನಾನು ನೀಡಿದ ಪ್ರಮಾಣ ಪತ್ರ ಆಗಿರುತ್ತದೆ. ಅದರ ಮೇಲೆ ಇರುವ ತಮ್ಮ ಸಹಿಯನ್ನು ಸಾಕ್ಷಿಯು ನೋಡಿ ಗುರ್ತಿಸಿದ್ದರಿಂದ ಅದನ್ನು ನಿಪಿ-13(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ಎಸ್.ಎಂ.ಪಿ ವಕೀಲರು ಎದುರುದಾರರ ಪರವಾಗಿ :**

ಮೃತ ಹುಸೇನಪ್ಪ ಇವರು ನಮ್ಮ ಊರಿನ ನಿವಾಸಿಯಾಗಿದ್ದರು. ಅವರು ನನ್ನ ಸಂಬಂಧಿಕರು ಆಗಿರಲಿಲ್ಲ. ಅವರು ನಮ್ಮ ಸಮೂದಾಯದವರು ಆಗಿದ್ದರು. ನನ್ನ ಮತ್ತು ಅವರ ಮಧ್ಯ ಕಳೆದ ಎರಡು-ಮೂರು ವರ್ಷಗಳಿಂದ ಸಂಬಂಧ ಚೆನ್ನಾಗಿತ್ತು.

ನಾನು ಬಿ.ಎ ಪದವಿದರನಾಗಿರುತ್ತೇನೆ. ನಿ.ಪಿ-21 ನನಗೆ ನೀಡಿದ ಗುತ್ತಿಗೆ ಪರವಾನಿಗೆ ಆಗಿರುತ್ತದೆ. ನಮಗೆ ಪ್ರತ್ಯೇಕವಾದ ಗುರ್ತಿನ ಚೀಟಿ ನೀಡುವ ಕ್ರಮ ಇರುವುದಿಲ್ಲ. ನಿ.ಪಿ-21 ಇದು ಗುತ್ತಿಗೆದಾರರ ಪಾಸ ಪುಸ್ತಕ ಆಗಿದ್ದು ಅದು ಪರವಾನಿಗೆ

ಪತ್ರ ಅಲ್ಲ ಎಂದರೆ ಸರಿಯಲ್ಲ. ನಾನು ಕಳೆದ 5 ವರ್ಷಗಳಿಂದ ಗುತ್ತಿಗೆದಾರನ್ನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ 5 ವರ್ಷಗಳಿಂದ ಇಂದೆ ಗುತ್ತಿಗೆ ಪರವಾನಿಗೆ ಪತ್ರ ನೀಡಿದ್ದರು ಆದರೆ ಯಾವ ವರ್ಷ ನನಗೆ ಸದರಿ ಪರವಾನಿಗೆ ನೀಡಲಾಗಿದೆ ಎಂದು ನಿಖರವಾಗಿ ನೆನಪಿಲ್ಲ. ಮೃತ ಹುಸೇನಪ್ಪ ನನ್ನ ಬಳಿ ಸುಮಾರು ಎರಡುವರೆ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ನಿ.ಪಿ-21 ಇದನ್ನು ನನಗೆ ದಿನಾಂಕ 03-01-2024 ರಲ್ಲಿ ನೀಡಿದ್ದು ಕಂಡು ಬರುತ್ತದೆ ಎಂದರೆ ಸಾಕ್ಷಿ ಅದನ್ನು ನವೀಕರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಅದಕ್ಕು ಮುಂಚೆ ನನಗೆ ನೀಡಿದ ಗುತ್ತಿಗೆ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ವರ್ಕ ಆರ್ಡರ್ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಸಾಕ್ಷಿ ಸರ್ಕಾರಿ ಗುತ್ತಿಗೆ ಕೆಲಸ ಮಾಡಿದರೆ ಮಾತ್ರ ವರ್ಕ ಆರ್ಡರ್ ನೀಡುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ-21 ರ ಪ್ರಕಾರ ನಾನು ಕರ್ನಾಟಕ ಸರ್ಕಾರದಿಂದ ಪಡೆದ ಸರ್ಕಾರಿ ಗುತ್ತಿಗೆ ಕೆಲಸಗಳನ್ನು ಕರ್ನಾಟಕ ರಾಜ್ಯದಲ್ಲಿ ಮಾತ್ರ ಮಾಡಬಹುದು ಎಂದರೆ ನಿಜ. ಖಾಸಗಿ ಗುತ್ತಿಗೆ ಕೆಲಸವನ್ನು ಎಲ್ಲಿಬೇಕಾದರು ಮಾಡಬಹುದು. ನಿ.ಪಿ-21 ನ್ನು ಆಧರಿಸಿ ಬೇರೆ ರಾಜ್ಯಗಳಲ್ಲಿ ಗುತ್ತಿಗೆ ಕೆಲಸ ಮಾಡಲು ಬರುವುದಿಲ್ಲ ಎಂದರೆ ನಿಜ. ನಾನು 4ನೇ ಸ್ಥರದ ಗುತ್ತಿಗೆದಾರ ಎಂದು ಲೋಕೋಪಯೋಗಿ ಇಲಾಖೆಯವರು ನನಗೆ ಪರವಾನಿಗೆ ನೀಡಿದ್ದರ ಬಗ್ಗೆ ನನ್ನ ಮುಖ್ಯ ವಿಚಾರಣ ಪತ್ರದಲ್ಲಿ ಕಾಣಿಸಿರುತ್ತೇನೆ ಎಂದರೆ ನೀಜ ಸಾಕ್ಷಿಯು ಈಗ ನನಗೆ ತೃತೀಯ ದರ್ಜೆ ಗುತ್ತಿಗೆದಾರ ಎಂದು ಪರವಾನಿಗೆ ಪತ್ರ ನೀಡಿರುವುದಾಗಿ ನುಡಿಯುತ್ತಾರೆ.

ನನ್ನ ಬಳಿ ಈಗ ನಾಲ್ಕೈದು ಜನರು ಕೆಲಸ ಮಾಡುತ್ತಿದ್ದಾರೆ. ಕಾಮಗಾರಿಯನ್ನು ಆಧರಿಸಿ ನಾನು ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತೇನೆ. ಗುತ್ತಿಗೆ ಕೆಲಸದ ಮೂಲಕ ನಾನು ಪ್ರತಿ ವರ್ಷ ರೂಪಾಯಿ 2 ರಿಂದ 3 ಲಕ್ಷ ವ್ಯವಹಾರ ಮಾಡುತ್ತೇನೆ. ಆ ರೀತಿ ನಾನು ಪ್ರತಿ ವರ್ಷ ರೂಪಾಯಿ 2 ರಿಂದ 3 ಲಕ್ಷ ನೀವಳ ಆಧಾಯ ಪಡೆಯುತ್ತೇನೆ. ನಾನು ಪ್ರತಿ ವರ್ಷ ಸುಮಾರು ರೂಪಾಯಿ 10 ಲಕ್ಷದ ವರೆಗೆ ಗುತ್ತಿಗೆ ಕೆಲಸ ಮಾಡುತ್ತೇನೆ. ಮನೆ ಕಟ್ಟುವ ಮೇಸ್ತ್ರಿಗೆ ನಾನು ಪ್ರತಿ ದಿನ ರೂಪಾಯಿ 800/- ಕೂಲಿ ನೀಡುತ್ತೇನೆ. ಆತನ ಕೈಕೆಳಗಿನ ಕೆಲಸದವರಿಗೆ ಪ್ರತಿ ದಿನ ರೂಪಾಯಿ 500/- ಕೂಲಿ ನೀಡುತ್ತೇನೆ. ನಾನು ಕಾರ್ಮಿಕ ಇಲಾಖೆಯಿಂದ ಕಾರ್ಮಿಕರನ್ನು ನೇಮಿಸಿಕೊಳ್ಳುವ ಕುರಿತು ಪ್ರತ್ಯೇಕ ಪರವಾನಿಗೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಪುನಃ ವಿದ್ಯುತ್ ಕಾಮಗಾರಿ ಕುರಿತು ಕಾರ್ಮಿಕ

ಇಲಾಖೆಯಿಂದ ಅನುಮತಿಯನ್ನು ಪಡೆದಿರುವುದಾಗಿ ನುಡಿಯತ್ತಾರೆ. ಸದರಿ ಅನುಮತಿ ಪತ್ರವನ್ನು ನಾನು ಹಾಜರು ಪಡಿಸಿರುವುದಿಲ್ಲ. ನಾನು ನನ್ನ ಗುತ್ತಿಗೆ ವ್ಯವಹಾರ ಕುರಿತು ಸಲ್ಲಿಸಿದ ಆದಾಯ ತೆರಿಗೆ ಪಾವತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ.

ನಾನು ಕೆಲಸಗಾರರಿಗೆ ನಗದು ಆಗಿ ಕೂಲಿ ನೀಡುತ್ತಿದ್ದೇನು. ನನ್ನ ಬಳಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಕುರಿತು ಹಾಜರಾತಿ ಪುಸ್ತಕ, ವೇತನ ಪುಸ್ತಕ, ಮುಂತಾದ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಅಂತಹ ದಾಖಲೆಗಳನ್ನು ತಾನು ನಿರ್ವಹಣೆ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಮೃತ ಹುಸೇನಪ್ಪ ಇವರ ಹೆಂಡತಿ ನನ್ನ ಬಳಿ ಬಂದು ವೇತನ ಪ್ರಮಾಣ ಪತ್ರ ನೀಡುವಂತೆ ಕೇಳಿಕೊಂಡಿರುವುದರಿಂದ ನಾನು ನಿ.ಪಿ-13 ರಂತೆ ಪ್ರಮಾಣ ಪತ್ರ ನೀಡಿರುತ್ತೇನೆ. ಮೃತ ಹುಸೇನಪ್ಪ ನನ್ನ ಬಳಿ ಮೇಸ್ತ್ರಿ ಕೆಲಸ ಮಾಡುತ್ತಿದ್ದರು ಮತ್ತು ನಾನು ಅವರಿಗೆ ಪ್ರತಿದಿನ ರೂಪಾಯಿ 800/- ಕೂಲಿ ನೀಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯ್ಲಲ. ಮೃತ ಹುಸೇನಪ್ಪ ನಮ್ಮ ಊರಿನವರು ಆಗಿದ್ದರಿಂದ ಅವರ ಕುಟುಂಬದವರಿಗೆ ಸಹಾಯ ಮಾಡಲು ನಿ.ಪಿ-13 ರಂತೆ ಸುಳ್ಳು ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. 2022 ರಲ್ಲಿ ನಾನು ಯಾವದೇ ಗುತ್ತಿಗೆ ಕೆಲಸ ಮಾಡುತ್ತಿರಲಿಲ್ಲ ಆ ಕಾರಣಕ್ಕೆ 2022 ರ ಗುತ್ತಿಗೆ ಪರವಾನಿಗೆ ಪತ್ರವನ್ನು ನಾನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಓ. ಹೇಳಿ ಸಹಿ ಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು,
ರಾಯಚೂರು.